ಅಸಲು ದಾವಾ ಸಂಖ್ಯೆ - 161/2018
ಪಿಡಬ್ಲ್ಯೂ - 01
ದಿನಾಂಕಃ 15-01-2025
ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ ಪ್ರತಿವಾದಿಯರ ಪರ ಶ್ರೀ.ಎನ್.ಎಸ್.ಪಿ ವಕೀಲರಿಂದಃ**

ಪ್ರತಿವಾದಿಯರ ವಿರುದ್ಧ ಯಾವ ಉದ್ದೇಶಕ್ಕಾಗಿ ಈ ದಾವೆಯನ್ನು ಸಲ್ಲಿಸಿದ್ದೀರಿ ಎಂದರೆ ನಮ್ಮ ಆಸ್ತಿಯ ಕಬ್ಜಾ ವಿಷಯವಾಗಿ ಅವರ ವಿರುದ್ಧ ದಾವೆಯನ್ನು ಸಲ್ಲಿಸಿರುತ್ತೇವೆ. ದಾವಾ ಆಸ್ತಿಯ ಸರ್ವೇ ನಂಬರ 87/1 ಎ ಇರುತ್ತದೆ. ಪಂಚಾಯತಿ ಆಸ್ತಿ ನಂಬರ 468/8 ಇರುತ್ತದೆ. ನಿಮ್ಮ ಮತ್ತು ಪ್ರತಿವಾದಿಯರ ನಡುವೆ ದಾವಾ ಆಸ್ತಿಯ ಅಳತೆಗೆ ಸಂಬಂಧಪಟ್ಟಂತೆ ವಿವಾದ ಇದೆ ಎಂದರೆ ಸರಿ. ಜಗಳದ ಆಸ್ತಿಯು ಮೂಲತಃ ಪ್ರತಿವಾದಿಯರ ಆಸ್ತಿ ಎಂದರೆ ಸರಿ. ಜಗಳದ ಆಸ್ತಿಯನ್ನು ಪ್ರತಿವಾದಿ 1 ಮತ್ತು 2 ನೇ ರವರು ಬಸವನಗೌಡ ದುಂಡನಗೌಡ ಸಣ್ಣಮನಿರವರಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಸರಿ. ದಾವಾ ಆಸ್ತಿಯ ಮೇಲೆ ಬಸವನಗೌಡ ದುಂಡನಗೌಡ ಸಣ್ಣಮನಿರವರಿಗೆ ಮಾತ್ರ ಹಕ್ಕು ಇರುತ್ತದೆ ಎಂದರೆ ಸರಿ.

ನೀವು ಹಾಜರುಪಡಿಸಿದ ನಿಪಿ 3 ರಲ್ಲಿ ದಾವಾ ಆಸ್ತಿಯು ಬಸವನಗೌಡ ದುಂಡನಗೌಡ ಸಣ್ಣಮನಿರವರ ಹೆಸರಿನಲ್ಲಿಯೇ ಇದೆ ಎಂದರೆ ಸರಿ. ದಾವಾ ಆಸ್ತಿಯಲ್ಲಿ ನಿಮಗೇನು ಹಕ್ಕು ಇಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಯು ನಿಮಗೆ ಹೇಗೆ ಬಂದಿತು ಎಂದರೆ ನಮ್ಮ ತಂದೆಯು ಖರೀದಿ ಹಿಡಿದ ನಂತರ ನಮಗೆ ಬಂದಿರುತ್ತದೆ. ನಿಮ್ಮ ತಂದೆಯು ಖರೀದಿ ಹಿಡಿದರು ಎನ್ನಲಾದ ಖರೀದಿ ಪತ್ರ ಇದೆಯಾ ಎಂದರೆ ನಮ್ಮ ತಂದೆಯು ಬಸವನಗೌಡ ದುಂಡನಗೌಡ ಸಣ್ಣಮನಿರವರ ಹೆಸರಿನಲ್ಲಿ ಖರೀದಿ ಹಿಡಿದಿರುತ್ತಾರೆ. ನಿಮ್ಮ ತಂದೆಯು ಬಸವನಗೌಡ ದುಂಡನಗೌಡ ಸಣ್ಣಮನಿರವರ ಹೆಸರಿನಲ್ಲಿ ದಾವಾ ಆಸ್ತಿಯನ್ನು ಖರೀದಿ ಹಿಡಿದಿರುತ್ತಾರೆ ಎಂದು ಸುಳ್ಳು ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

ದಾವಾ ಆಸ್ತಿಯು ನಿಮ್ಮ ಹೆಸರಿಗೆ ಹೇಗೆ ಬಂದಿತು ಎಂದರೆ ನಾನು ಮತ್ತು ನನ್ನ ತಮ್ಮನಾದ ಬಸವನಗೌಡ ದುಂಡನಗೌಡ ಸಣ್ಣಮನಿರವರು ಪಂಚಾಯತಿ ಮುಖಾಂತರ ನಮ್ಮಿಬ್ಬರ ಹೆಸರಿನಲ್ಲಿ ಜಂಟಿ ಖಾತೆ ಮಾಡಿಕೊಂಡಿರುತ್ತೇವೆ. ಸದರಿ ವಿಷಯವಾಗಿ ದಾವಾ ಆಸ್ತಿಯು ನಿಮ್ಮ ಹೆಸರಿಗೆ ಬಂದ ಬಗ್ಗೆ ಯಾವುದಾದರು ನೊಂದಾಯಿತ ದಾಖಲೆ ಇದೆಯಾ ಎಂದರೆ ಇರುವುದಿಲ್ಲ, ಆದರೆ ಪಂಚಾಯತಿಯಲ್ಲಿ ನಾವು ಅರ್ಜಿಯನ್ನು ನೀಡಿ ಜಂಟಿ ಖಾತೆ ಮಾಡಿಸಿರುತ್ತೇವೆ. ನೀವು ಮತ್ತು

ನಿಮ್ಮ ತಮ್ಮನಾದ ಬಸವನಗೌಡ ದುಂಡನಗೌಡ ಸಣ್ಣಮನಿರವರು ಜಂಟಿ ಖಾತೆ ಮಾಡಿಕೊಂಡಿರುವ ವಿಷಯ ಪ್ರತಿವಾದಿಯರಿಗೆ ಗೊತ್ತಿರುವುದಿಲ್ಲ ಎಂದರೆ ಸರಿ. ಪ್ರತಿವಾದಿಯರಿಗೆ ತಿಳಿಯದಂತೆ ಪಂಚಾಯತಿ ಅಧಿಕಾರಿಯೊಂದಿಗೆ ಮಿಲಾಪಿಯಾಗಿ ದಾವಾ ಆಸ್ತಿಯಲ್ಲಿ ನಿಮ್ಮ ಹೆಸರನ್ನು ನಮೂದು ಮಾಡಿಸಿರುತ್ತೀರಿ ಎಂದರೆ ಸರಿಯಲ್ಲ.

ದಾವಾ ಆಸ್ತಿಯ ಮೇಲೆ ನಿಮಗೆ ವೈಯಕ್ತಿಕವಾಗಿ ಯಾವುದೇ ಹಕ್ಕು ಇಲ್ಲ ಎಂದರೆ ಸರಿಯಲ್ಲ. ನೀವು ನಿಮ್ಮ ತಮ್ಮನಾದ ಬಸವನಗೌಡ ದುಂಡನಗೌಡ ಸಣ್ಣಮನಿರವರಿಗೆ ತಿಳಿಯದಂತೆ ನಿಮ್ಮ ಹೆಸರನ್ನು ಸಹ ದಾವಾ ಆಸ್ತಿಯಲ್ಲಿ ದಾಖಲು ಮಾಡಿರುತ್ತೀರಿ ಎಂದರೆ ಸರಿಯಲ್ಲ. ನಿಮ್ಮ ತಮ್ಮನಾದ ಬಸವನಗೌಡ ದುಂಡನಗೌಡ ಸಣ್ಣಮನಿರವರು ದಾವಾ ಆಸ್ತಿಯನ್ನು ನಿಮಗೆ ಬಿಟ್ಟುಕೊಟ್ಟಿದ್ದಾರೆ ಎಂದು ತೋರಿಸಲು ಯಾವುದೇ ದಾಖಲಾತಿಯನ್ನು ನೀವು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ಮುಂದುವರೆದು ದಾಖಲೆಗಳನ್ನು ನಾನು ಹಾಜರುಪಡಿಸಿದ್ದೇನೆ. ದಾವಾ ಆಸ್ತಿಗಳ ಮೇಲೆ ನಿಮಗೆ ಮಾಲೀಕತ್ವ ಇಲ್ಲದೇ ಇದ್ದರೂ ಸಹ, ಮಾಲೀಕತ್ವ ಇದೆ ಎಂದು ಹೇಳುತ್ತಾ, ದಾಖಲೆಗಳನ್ನು ಹಾಜರುಪಡಿಸಿದ್ದೇನೆ ಎಂದು ಸುಳ್ಳು ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ. ದಾವಾ ಆಸ್ತಿಯ ಮೇಲೆ ನಿಮಗೆ ಹಕ್ಕು ಇಲ್ಲದಿದ್ದರೂ ಸಹ ಮತ್ತು ಸಾಕ್ಷಿ ಹೇಳಲು ಅರ್ಹತೆ ಇಲ್ಲದಿದ್ದರೂ ಸಹ ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

ದಾವಾ ಆಸ್ತಿಯ ಅಳತೆ ಪೂರ್ವದಿಂದ ಪಶ್ಚಿಮಕ್ಕೆ 37 ಮೀಟರ್, ಉತ್ತರದಿಂದ ದಕ್ಷಿಣಕ್ಕೆ 14½ ಮೀಟರ್ ಇರುತ್ತದೆ. ಸದರಿ ಅಳತೆಯನ್ನು ನೀವೇನಾದರು ನಿಮ್ಮ ವಾದ ಪತ್ರದಲ್ಲಿ ಬರೆಸಿದ್ದೀರಾ ಎಂದರೆ ಬರೆಸಿರುತ್ತೇನೆ. ನೀವು ಸಲ್ಲಿಸಿದ ಹಾತ ನಕಾಶೆಯಲ್ಲಿ ದಾವಾ ಆಸ್ತಿಯ ಅಳತೆ ನಮೂದಿಸಿರುವುದಿಲ್ಲ ಎಂದರೆ ಸಾಕ್ಷಿಯು ಹಾತ ನಕಾಶೆಯನ್ನು ನೋಡಿ ಪರಿಶೀಲಿಸಿ ದಾವಾ ಆಸ್ತಿಯ ಅಳತೆಯನ್ನು ನಮೂದು ಮಾಡಿರುವುದಿಲ್ಲ ಎಂದು ನುಡಿಯುತ್ತಾರೆ. ನೀವು ಸಲ್ಲಿಸಿದ ದಾವಾ ಪತ್ರದಲ್ಲಿ ಮತ್ತು ಹಾತ ನಕಾಶೆಯಲ್ಲಿ ದಾವಾ ಆಸ್ತಿಯ ಅಳತೆಯನ್ನು ನಮೂದು ಮಾಡಿರುವುದಿಲ್ಲ ಎಂದರೆ ಸಾಕ್ಷಿಯು ನಮೂದು ಮಾಡಿದ್ದೇವೆ ಎಂದು ನುಡಿಯುತ್ತಾರೆ.

ಪ್ರತಿವಾದಿಯರ ಆಸ್ತಿ ನಿಮ್ಮ ಆಸ್ತಿಯ ದಕ್ಷಿಣಕ್ಕೆ ಬರುತ್ತದೆ ಎಂದರೆ ಸರಿ. ದಾವಾ ಆಸ್ತಿಯನ್ನು ಪ್ರತಿವಾದಿಯರ ತಂದೆಯು ಬಿನ್ ಶೇತ್ಕಿ ಮಾಡಿಸಿರುತ್ತಾರೆ ಎಂದರೆ ಸರಿ. ಬಿನ್ ಶೇತ್ಕಿ ಮಾಡಿಸಿದ ನಂತರ ಸದರಿ ಆಸ್ತಿಯಲ್ಲಿ ಒಟ್ಟು 9 ಪ್ಲಾಟುಗಳು ಆಗಿರುತ್ತವೆ ಎಂದರೆ ಸರಿ. 9 ನೇ ಪ್ಲಾಟು ಪ್ರತಿವಾದಿಯರ ಮಾಲ್ಕಿ ಪ್ಲಾಟ ಆಗಿರುತ್ತದೆ ಎಂದರೆ ಸರಿ. ಬಿನ್ ಶೇತ್ಕಿ ಮಾಡಿಸಿದಾಗಿನಿಂದಲೂ ಸಹ ಎಲ್ಲಾ ಪ್ಲಾಟಗಳ ಅಳತೆ ಹಾಗೆಯೇ ಇದೆ ಎಂದರೆ ಸರಿ.

ಪ್ರತಿವಾದಿಯರಿಂದ ನೀವು ಎಷ್ಟು ಗುಂಟೆ ಆಸ್ತಿಯನ್ನು ಖರೀದಿ ಮಾಡಿದ್ದೀರಿ ಎಂದರೆ 5 ಗುಂಟೆ ಆಸ್ತಿಯನ್ನು ಖರೀದಿ ಮಾಡಿರುತ್ತೇವೆ. ಪ್ರತಿವಾದಿಯರು 8 ಪ್ಲಾಟುಗಳನ್ನು ಮಾರಾಟ ಮಾಡಿ 9 ನೇ ಪ್ಲಾಟನಲ್ಲಿ 11 ಗುಂಟೆ 14 ಆಣೆ ಆಸ್ತಿಯನ್ನು ಉಳಿಸಿಕೊಂಡಿರುತ್ತಾರೆ ಎಂದರೆ ಅದರ ಬಗ್ಗೆ ನನಗೆ ಗೊತ್ತಿರುವುದಿಲ್ಲ. ಪ್ರತಿವಾದಿಯರ 9 ನೇ ಪ್ಲಾಟನಲ್ಲಿ ನಿಮಗೆ ಯಾವುದೇ ಹಕ್ಕು ಇಲ್ಲ ಎಂದರೆ ಸರಿ.

9 ನೇ ಪ್ಲಾಟನಲ್ಲಿದ್ದ 11 ಗುಂಟೆ 14 ಆಣೆ ಆಸ್ತಿಯನ್ನು 1 ರಿಂದ 4 ನೇ ಪ್ರತಿವಾದಿಯರು ಕೌಟುಂಬಿಕ ವ್ಯವಸ್ಥೆಯ ಪ್ರಕಾರ 7 ಗುಂಟೆ 14 ಆಣೆ, ತಲಾ 2 ಗುಂಟೆರಂತೆ ಆಸ್ತಿಯನ್ನು ಪಾಲು ವಿಭಾಗ ಮಾಡಿಕೊಂಡಿರುತ್ತಾರೆ ಎಂದರೆ ಸರಿ. ಪ್ರತಿವಾದಿ 3 ಮತ್ತು 4 ನೇ ದವರ ಹೆಸರಿಗೆ ತಲಾ 2 ಗುಂಟೆ ಆಸ್ತಿಯಂತೆ ಪಾಲು ವಿಭಾಗ ಮುಖಾಂತರ ಅವರ ಹೆಸರು ದಾಖಲು ಆಗಿರುತ್ತದೆ ಎಂದರೆ ಸರಿ. ಈ ಪಾಲು ವಿಭಾಗದ ಬಗ್ಗೆ ನಿಮ್ಮದೇನು ತಕರಾರು ಇರುವುದಿಲ್ಲ ಎಂದರೆ ಸರಿ.

ಪ್ರತಿವಾದಿಯರು ದಾವೇದ ಆಸ್ತಿಯಲ್ಲಿ ಉತ್ತರ-ದಕ್ಷಿಣ 6 ಫೂಟುಗಳಷ್ಟು ಅತಿಕ್ರಮಣ ಮಾಡಿದ್ದಾರೆ ಎಂದು ದಾವಾ ಪತ್ರದಲ್ಲಿ ಬರೆಸಿರುತ್ತೀರಿ ಎಂದರೆ ಸರಿ. ಸದರಿ ವಿಷಯವನ್ನು ನೀವು ಸಲ್ಲಿಸಿದ ಹಾತ ನಕಾಶೆಯಲ್ಲಿ ಐ.ಸಿ.ಡಿ.ಜೆ ರಂತೆ ಕಾಣಿಸಿದ್ದೀರಿ ಎಂದರೆ ಸರಿ. ಪ್ರತಿವಾದಿಯರು ನಿಮ್ಮ ದಾವಾ ಆಸ್ತಿಯಲ್ಲಿ 6 ಫೂಟುರಷ್ಟು ಅತಿಕ್ರಮಣ ಮಾಡಿದ್ದಾರೆ ಎಂದು ಪ್ರತಿವಾದಿಯರ ವಿರುದ್ಧ ಕಬ್ಜಾ ಕೇಳಿ ದಾವೆಯನ್ನು ಏನಾದರು ಹೂಡಿದ್ದೀರಾ ಎಂದರೆ ಸಾಕ್ಷಿಯು ಸದರಿ ದಾವೆಯನ್ನು ಕಬ್ಜಾ ಕೇಳಿಯೇ ಹೂಡಿರುತ್ತೇವೆ ಎಂದು ನುಡಿಯುತ್ತಾರೆ. ದಾವಾ ಆಸ್ತಿಯನ್ನು ಅಳತೆ ಮಾಡಲು ಕೋರ್ಟ ಕಮಿಷನರನ್ನು ನೇಮಕ ಮಾಡಿಸಿ ನಂತರ ಅವರ ವರದಿಯನ್ನು ಸಲ್ಲಿಸಲು ನ್ಯಾಯಾಲಯದಿಂದ ಆದೇಶವಾಗಿತ್ತು ಎಂದರೆ ಸರಿ. ಆ ಪ್ರಕಾರ ಕೋರ್ಟ ಕಮಿಷನರ್ ಉಭಯ ಪಕ್ಷಗಾರರಿಗೆ ನೋಟೀಸ ನೀಡಿ 9 ಪ್ಲಾಟುಗಳನ್ನು ಸಹ ಅಳತೆ ಮಾಡಿ ವರದಿಯನ್ನು ಸಲ್ಲಿಸಿರುತ್ತಾರೆ ಎಂದರೆ ಸರಿ.

ಕೋರ್ಟ ಕಮಿಷನರ್ ವರದಿಯ ಪ್ರಕಾರ ತಾವುಗಳೆ ಪ್ರತಿವಾದಿಯರ 3 ಗುಂಟೆ 10 ಆಣೆ ಆಸ್ತಿಯನ್ನು ಅತಿಕ್ರಮಣ ಮಾಡಿದ್ದೀರಿ ಎಂದು ತಿಳಿಸಿರುತ್ತಾರೆ ಎಂದರೆ ಸಾಕ್ಷಿಯು ಸದರಿ ವರದಿಯು ಅವೈಜ್ಞಾನಿಕವಾಗಿದ್ದು, ಆ ವರದಿಯು ಸುಳ್ಳಿನಿಂದ ಕೂಡಿತ್ತು, ಸದರಿ ವರದಿಗೆ ನಾವು ತಕರಾರನ್ನು ನೀಡಿರುತ್ತೇವೆ. ಕೋರ್ಟ ಕಮಿಷನರರವರು ಮಷಿನ್ ಮುಖಾಂತರ ಅಳತೆ ಮಾಡಿ ವರದಿಯನ್ನು ಸಲ್ಲಿಸಿರುತ್ತಾರೆ ಎಂದರೆ ಸಾಕ್ಷಿಯು ಕೋರ್ಟ ಕಮಿಷನರರವರು ಎರಡು ರೀತಿಯಲ್ಲಿ ಆಸ್ತಿಯನ್ನು ಅಳತೆ ಮಾಡಿ, 1) ನಕಾಶೆಯ ಪ್ರಕಾರ, 2) ವಹಿವಾಟಿನ ಪ್ರಕಾರ, ಅಳತೆ ಮಾಡಿದ್ದು,

ಕೋರ್ಟ ಕಮಿಷನರರವರು ನಕಾಶೆಯ ಪ್ರಕಾರ ಇದ್ದ ಅಳತೆಯ ವರದಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿದ್ದು, ವಹಿವಾಟಿ ಪ್ರಕಾರ ಇದ್ದ ಅಳತೆಯನ್ನು ನ್ಯಾಯಾಲಯಕ್ಕೆ ಸಲ್ಲಿಸಿರುವುದಿಲ್ಲ. ಕೋರ್ಟ ಕಮಿಷನವರರವರು ಸರಿಯಾದ ರೀತಿಯಲ್ಲಿ ಅಳತೆ ಮಾಡಿ ವರದಿಯನ್ನು ಸಲ್ಲಿಸಿದ್ದರೂ ಸಹ ಅದನ್ನು ಸುಳ್ಳು ವರದಿ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

ಪ್ರತಿವಾದಿಯರು ನಿಮ್ಮ ಆಸ್ತಿಯನ್ನು ಯಾವಾಗ ಅತಿಕ್ರಮಣ ಮಾಡಿದ್ದಾರೆ ಎಂದು ನಿಮಗೆ ತಿಳಿಯಿತು ಎಂದರೆ ದಿಃ21-05-2018 ರಂದು ಅತಿಕ್ರಮಣ ಮಾಡಿರುತ್ತಾರೆ. ದಿಃ21-05-2018 ರಂದು ಪ್ರತಿವಾದಿಯರು ದಾವಾ ಆಸ್ತಿಯನ್ನು ಅತಿಕ್ರಮಣ ಮಾಡಿದ್ದಾರೆ ಎಂದು ಕಬ್ಜಾ ಕೇಳಿ ದಾವೆಯನ್ನು ಮಾಡಿದ್ದೀರಾ ಎಂದರೆ ಕಬ್ಜಾ ಕೇಳಿ ಮಾಡಿರುವುದಿಲ್ಲ ಆದರೆ ಸದರಿ ವಿಷಯವಾಗಿ ಈ ದಾವೆಯನ್ನು ಸಲ್ಲಿಸಿರುತ್ತೇವೆ.

**ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದರಿಂದ ಮುಂದೂಡಲಾಯಿತು.**

( ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು.)

ಓ. ಹೆ. ಕೆ. ಸರಿ ಅದೆ.

ದಿವಾಣಿ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂಡಾಧಿಕಾರಿಗಳು, ಸವಣೂರು